

**ನ್ಯೂಜಿಲೆಂಡ್‌ನ ರೊಟೊರುವಾ ಬಿಸಿನೀರಿನ ಬುಗ್ಗೆಗಳ ತವರು. ಅಲ್ಲಿನ ಮಾವೋರಿ ಕಣಿವೆಯಲ್ಲಿ ಸುಮಾರು 300 ಬಿಸಿನೀರ ಚಿಲುಮೆಗಳು ಹಾಗೂ 11 ಸರೋವರಗಳು ಇವೆಯಂತೆ. ಬಿಸಿನೀರಿನ ಬೆರಗಿನ ಜೊತೆಗೆ ಸ್ವಾರಸ್ಯಕರ ಕಥನಗಳಿಂದಲೂ ಗಮನಸೆಳೆಯುವ ಈ ತಾಣ, ಸಾಹಸಕ್ರೀಡೆಗಳಿಗೂ ಪ್ರಸಿದ್ಧ.**

ಅಂದರೆ, ರೊಟೊರುವಾ ಎರಡು ಸುಂದರ ಜ್ವಾಲಾಮುಖಿ ಸರೋವರದ ದಡದಲ್ಲಿದೆ.

ನಾವು ನಾಲ್ಕು ಜನರ ತಂಡ ಕ್ವೀನ್‌ಟೌನ್‌ನಿಂದ ರೊಟೊರುವಾಕ್ಕೆ ಬಂದಿಳಿದಾಗ ಬೆಳಿಗ್ಗೆ ಹವಾಗುಣ ಚೇತೋಹಾರಿಯಾಗಿದ್ದು ಎಲ್ಲೆಲ್ಲೂ ಎಳೆ ಬಿಸಿಲು ಚೆಲ್ಲಿತ್ತು. ನಾವು ತಂಗಿದ್ದ ಹೋಟೆಲ್ ಐಬಿಸ್‌ನ ಬಾಲ್ಕನಿಯಲ್ಲಿ ನಿಂತು ನೋಡಿದರೆ ಸುತ್ತಲಿನ ಗುಡ್ಡ, ಬೆಟ್ಟಗಳ ಹಚ್ಚ ಹಸಿರ ವಾತಾವರಣ, ನೀಲ ಸರೋವರಗಳ ದೃಶ್ಯ ಮನಸೂರೆಗೊಳ್ಳುವಂತಿತ್ತು.

ತಡಮಾಡದೆ ಮಾವೋರಿ ಕಣಿವೆಯತ್ತ ಹೆಜ್ಜೆ ಹಾಕಿದೆವು. ದಾರಿ ಬದಿಗಳಲ್ಲಿ, ಗಿಡ–ಮರಗಳ ಸಂದುಗೊಂದುಗಳಲ್ಲಿ, ಮನೆಗಳ ಮುಂದೆ, ಹೀಗೆ ಕಂಡಕಂಡಲ್ಲಿ ಹೊಗೆ ಮೇಲೇಳುವ ದೃಶ್ಯಗಳು ಇಡೀ ಊರನ್ನೇ ಹರಿಶ್ಚಂದ್ರ ಘಾಟ್‌ನಂತೆ ಬಿಂಬಿಸುತ್ತಿದ್ದವು. ಕೊಳೆತ ಮೊಟ್ಟೆಯಂಥ ಗಂಧಕಾಮ್ಲದ ದುರ್ವಾಸನೆ ಮೂಗಿಗೆ ಬಡಿದು ವಾಕರಿಕೆ ಬರುತ್ತಿತ್ತು. ಹತ್ತು ಗಂಟೆಯ ಹೊತ್ತಿಗೆ ಮಾವೋರಿ ಕಣಿವೆಯ, ತರವೇರಾ ಬೆಟ್ಟಗಳ ತಪ್ಪಲಿನ ವ್ಹಕಾರೆವರೆವಾ ಎಂಬ ಸ್ಥಳವನ್ನು ತಲುಪಿದ್ದೆವು. ಟಿಕೆಟ್ ಪಡೆದು ಗೈಡ್‌ನ ಜೊತೆಗೆ ಅಂಕುಡೊಂಕಾದ ಕಣಿವೆಯೊಳಗೆ ಇಳಿದೆವು.

### ಎಲ್ಲಿ ನೋಡಿದರೂ ಹೊಗೆ!

ಹೊಲ–ಗದ್ದೆಗಳಲ್ಲಿ ಹಸಿಹುಲ್ಲಿಗೆ ಬೆಂಕಿ ಹಚ್ಚಿದಾಗ ಎಳೆ ಎಳೆಯಾಗಿ ಮೇಲೇಳುವಂಥ ಹೊಗೆಯ ವಾತಾವರಣ ಸುತ್ತಲೂ. ತಂಬೂರಿ ಹಿಡಿದ ನಾರದರು ಪೌರಾಣಿಕ ಸಿನಿಮಾಗಳಲ್ಲಿ ಮೋಡಗಳ ನಡುವೆ ಓಡಾಡುವಂತೆ ಭಾಸವಾಗುತ್ತಿತ್ತು. ವೈಟ್ ಐಲಂಡ್‌ನಿಂದ ಪ್ಲೆಂಟಿಕೊಲ್ಲಿಯವರೆಗೂ ಚಾಚಿಕೊಂಡಂತಹ ಪುರಾತನ ಹಳ್ಳಿಯದು. ಅದರ ವ್ಯಾಪ್ತಿ ಸುಮಾರು 600 ಚದರ ಮೀಟರ್ ಇದ್ದು, 160 ಮೀಟರ್ ಉದ್ದವಿದೆ ಎಂದು ಗೈಡ್ ಅಂಕಿ–ಅಂಶ ನೀಡಿದ್ದರು.

ಸುಮಾರು 70 ಮೀಟರ್ ಅಗಲದ ಲೇಡಿನ್ಯಾಕ್ಸ್ ಎಂಬ ಕೊತ ಕೊತ ಕುದಿಯುವ ಕೆಸರಿನ ಜ್ವಾಲಾಮುಖಿ ಎದುರಾದಾಗ ಆಶ್ಚರ್ಯ ಕಾದಿತ್ತು. 20 ಮೀಟರ್ ಎತ್ತರ ಪುಟಿಯುವ ಆ ಬಿಸಿನೀರ ಚಿಲುಮೆಯನ್ನು ನೋಡಲು ಅಲ್ಲಿ ನೂರಾರು ಜನ ಸೇರಿದ್ದರು. ಜೆಟ್‌ನಂತೆ ಚಿಮ್ಮುವ ಹಬೆ, ಬಿಸಿನೀರು, ಬಣ್ಣ ಬಣ್ಣಗಳ ಚಿತ್ತಾರ ರೂಪದಲ್ಲಿ ಹೊರಹೊಮ್ಮುವ ದೃಶ್ಯ ಆಕರ್ಷಕವಾಗಿತ್ತು. ಪಾಂಪೇನ್ ಪೋಲ್ ಎಂಬ ಹೆಸರಿನ ಚಿಲುಮೆಯ ಬಳಿ, ಜಿಗಿಯುವ ಕಪ್ಪೆಯಂಥ ಕೆಸರಿನ ಮಡುವೊಂದು ಪುಳಕ್ ಪುಳಕ್ ಎಂದು ಸಪ್ಪಳಮಾಡುತ್ತ ಸುತ್ತ ವೃತ್ತ ರಚಿಸಿಕೊಂಡು ಪುಟಿಯುವ ದೃಶ್ಯ ಅಪರೂಪವೆನಿಸಿತ್ತು.

ನಾವು ನೋಡಿದ ಐದಾರು ಜ್ವಾಲಾಮುಖಿಗಳಲ್ಲಿ ಪೊಹುಟು ಎಂಬ ಗೀಯ್ಸರ್ ಅನ್ನು ಮಾತ್ರ ಎಂದಿಗೂ ಮರೆಯುವಂತಿಲ್ಲ. ಗಂಟೆಗೊಮ್ಮೆ ದಿನಕ್ಕೆ 20 ಬಾರಿ ಪುಟಿಯುವ ಆ ಚಿಲುಮೆ ನೋಡಲು ಜನ ಕಿಕ್ಕಿರಿದು ಸೇರಿದ್ದರು. 20ರಿಂದ 30 ಮೀಟರ್ ಎತ್ತರಕ್ಕೆ ಪುಟಿಯುವ ಆ ಚಿಲುಮೆ ಜಗತ್ತಿನಲ್ಲಿಯೇ ಐದನೇ ರ‍್ಯಾಂಕಿನದು ಎಂದು ಗೈಡ್ ವಿವರಿಸಿದಾಗ ಆಶ್ಚರ್ಯವೆನಿಸಿತ್ತು. ಮಾವೋರಿ ಭಾಷೆಯಲ್ಲಿ 'ಪೊಹುಟು' ಎಂದರೆ ತುಷಾರ, ನೊರೆ, ಚಿಮ್ಮುವಿಕೆ ಎಂದರ್ಥ.

### ಬೆಂಕಿ ದೇವತೆಗಳ ಯುಗಳ

ಮಾವೋರಿ ಜನರ ನಂಬಿಕೆಯ ಪ್ರಕಾರ ಪೊಹುಟು ಗೀಯ್ಸರ್ ಪಾತಾಳದ ದೇವತೆ. ದೇವತೆ ಉಸಿರು ಬಿಟ್ಟಾಗ ಭೂಮಿಯ ಮೇಲೆ ಬಿಸಿ ನೀರು ಚಿಮ್ಮುತ್ತದೆಂದು ಅವರ ನಂಬಿಕೆ. 1886ರಲ್ಲಿ ತರವೇರಾ ಎಂಬ ಜ್ವಾಲಾಮುಖಿ ಕಣಿವೆಯ ತೈರೋವಾ ಎಂಬ ಹಳ್ಳಿಯಲ್ಲಿ ಸ್ಫೋಟಿಸಿತು. ಆಗ ಕಲ್ಲು, ಮಣ್ಣು, ಕೆಸರು ಸ್ಫೋಟಿಸಿ ಇಡೀ ಹಳ್ಳಿಯೇ ಎಂಟ್ಟತ್ತು ಅಡಿ ಕೆಳಗೆ ಕುಸಿದು, 147 ಮಾವೋರಿ ಜನ ಮತ್ತು 6 ಜನ ಯೂರೋಪಿಯನ್ನರು ಸಾವಿಗೀಡಾದ

